# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1263 |
| ಸದಸ್ಯರು ಹೆಸರು | : | ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 13.03.2026 |
| ಉತ್ತರಿಸುವ ಸಚಿವರು | : | ಗೃಹ ಸಚಿವರು. |

<table>
<tr><th>ಕ್ರಸ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ರಾಜ್ಯದಲ್ಲಿ ಆನ್‌ಲೈನ್ ಗೇಮ್‌ಗೆ ಮಕ್ಕಳು ಬಲಿಯಾಗುತ್ತಿರುವ ಹಲವಾರು ಪ್ರಕರಣಗಳು ಸಂಭವಿಸಿದ್ದು, ಇದರಿಂದ ಪೋಷಕರು ಆತಂಕ ಮತ್ತು ಕಳವಳಕ್ಕೆ ಈಡಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ರಾಜ್ಯದಲ್ಲಿ ಆನ್‌ಲೈನ್ ಗೇಮ್‌ಗೆ ಮಕ್ಕಳು ಬಲಿಯಾಗಿರುವ ಕುರಿತು 05 ಪ್ರಕರಣಗಳು ದಾಖಲಾಗಿರುತ್ತದೆ. ಜಿಲ್ಲಾವಾರು ಮತ್ತು ವರ್ಷವಾರು ಪ್ರಕರಣಗಳ ಅಂಕಿ-ಅಂಶ ಕೆಳಗಿನಂತಿರುತ್ತದೆ:-
<table>
<tr><th rowspan="2">ಘಟಕ</th><th colspan="4">ವರ್ಷ</th></tr>
<tr><th>2023</th><th>2024</th><th>2025</th><th>2026</th></tr>
<tr><td>ಬೆಂಗಳೂರು ನಗರ</td><td>0</td><td>0</td><td>1</td><td>0</td></tr>
<tr><td>ಹುಬ್ಬಳ್ಳಿ-ಧಾರವಾಡ</td><td>0</td><td>0</td><td>0</td><td>1</td></tr>
<tr><td>ಚಿಕ್ಕಮಗಳೂರು</td><td>1</td><td>1</td><td>1</td><td>0</td></tr>
<tr><td>ಒಟ್ಟು</td><td>1</td><td>1</td><td>2</td><td>1</td></tr>
</table>
</td></tr>
<tr><td>ಆ</td><td>ಬಂದಿದ್ದಲ್ಲಿ, ಮಕ್ಕಳಿಗೆ ಸಾಮಾಜಿಕ ಜಾಲತಾಣ ನಿಷೇಧ ಮಾಡಬೇಕೆಂಬ ಬೇಡಿಕೆ ಬಹುಸಂಖ್ಯಾತ ಪೋಷಕರಿಂದ ಸತತವಾಗಿ ಕೇಳಿ ಬರುತ್ತಿದ್ದು, ಈ ಕುರಿತು ಸರ್ಕಾರದ ನಿಲುವೇನು;</td><td>2026-27ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಮಾನ್ಯ ಮುಖ್ಯ ಮಂತ್ರಿಯವರು ಕಂಡಿಕೆ 118ರಲ್ಲಿ ಕೆಳಕಂಡಂತೆ ಘೋಷಿಸಿರುತ್ತಾರೆ:-<br><br>ಹೆಚ್ಚುತ್ತಿರುವ ಮೊಬೈಲ್ ಬಳಕೆಯಿಂದ ಮಕ್ಕಳ ಮೇಲೆ ಬೀರುವ ಅಡ್ಡ ಪರಿಣಾಮಗಳನ್ನು ತಡೆಗಟ್ಟುವ ಉದ್ದೇಶದಿಂದ 16 ವರ್ಷದೊಳಗಿನ ಮಕ್ಕಳಿಗೆ ಸಾಮಾಜಿಕ ಜಾಲತಾಣದ ಬಳಕೆಯನ್ನು ನಿಷೇಧಿಸಲಾಗುವುದು.<br><br>ಆನ್‌ಲೈನ್ ಆಟಗಳು ಸೇರಿದಂತೆ ಎಲ್ಲಾ ರೀತಿಯ ಅಕ್ರಮ ಜೂಜಾಟವನ್ನು ನಿಯಂತ್ರಿಸಲು ಭಾರತೀಯ ನ್ಯಾಯ ಸಂಹಿತೆ, ಕರ್ನಾಟಕ ಪೊಲೀಸ್ ಕಾಯ್ದೆ 1963 ಮತ್ತು ಐಟಿ ಕಾಯ್ದೆ ರೀತಿಯ ಕ್ರಮ ಕೈಗೊಳ್ಳಲಾಗುತ್ತಿದೆ.<br><br>ಮಕ್ಕಳು ಸಾಮಾಜಿಕ ಜಾಲತಾಣ ಬಳಕೆ ಮಾಡದಂತೆ ಶಾಲಾ ಕಾಲೇಜುಗಳಿಗೆ ತೆರಳಿ ಅರಿವು ಮೂಡಿಸುವ ಕಾರ್ಯಕ್ರಮವನ್ನು ಮಾಡಲಾಗಿರುತ್ತದೆ.<br><br>ಕೇಂದ್ರ ಸರ್ಕಾರ ಪ್ರಮೋಷನ್ ಮತ್ತು ರೆಗ್ಯೂಲೇಷನ್ ಆನ್‌ಲೈನ್ ಗೇಮಿಂಗ್ ಅಧಿನಿಯಮ 2025 ಅನ್ನು ಜಾರಿಗೆ ತಂದಿದ್ದು, ಇದರಡಿಯಲ್ಲಿ ಕ್ರಮ ಕೈಗೊಳ್ಳಲಾಗುವುದು.</td></tr>
</table>

| | | |
|---|---|---|
| ಇ | ಆನ್‌ಲೈನ್ ಗೇಮ್‌ನ ಗೀಳು ಬಹುತೇಕ ಮಕ್ಕಳಲ್ಲಿ ದೊಡ್ಡ ಪ್ರಮಾಣದಲ್ಲಿ ಕಂಡುಬರುತ್ತಿದ್ದು, ಅದು ಮಕ್ಕಳನ್ನು ಅತ್ಯಂತ ಆಘಾತಕಾರಿ ಅಪಾಯಗಳಿಗೆ ಒಡ್ಡುತ್ತಿರುವುದರ ಜೊತೆಗೆ ಅವರ ಸುಂದರ ಬಾಲ್ಯದ ಆಟೋಟ ಮತ್ತು ಇತರೆ ರಚನಾತ್ಮಕ ಚಟುವಟಿಕೆಗಳಿಂದ ಮಕ್ಕಳನ್ನು ಶಾಶ್ವತವಾಗಿ ದೂರ ಮಾಡಿ ಅವರನ್ನು ಮಾನಸಿಕ ಕ್ಷೋಭೆಗೆ ದೂಡುತ್ತಿದ್ದು, ಇದನ್ನು ತಪ್ಪಿಸಲು ಸರ್ಕಾರ ಇದುವರೆಗೆ ಯಾವುದೇ ಸೂಕ್ತ ಹಾಗೂ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಮುಂದಾಗದೇ ಇರಲು ಕಾರಣ ಕಾರಣಗಳೇನು; | ಮಕ್ಕಳು ಆನ್‌ಲೈನ್ ಗೇಮ್‌ಗಳಿಗೆ ಬಲಿಯಾಗುತ್ತಿರುವ ಬಗ್ಗೆ ಕಂಡು ಬಂದಲ್ಲಿ ನಿಯಮಾನುಸಾರ ಕಾನೂನು ರೀತ್ಯಾ ಪ್ರಕರಣ ದಾಖಲು ಮಾಡಿ ಕ್ರಮ ಕೈಗೊಳ್ಳಲಾಗುವುದು.<br>ಮಕ್ಕಳು ಸಾಮಾಜಿಕ ಜಾಲತಾಣ ಅದರಲ್ಲಿಯೂ ಆನ್‌ಲೈನ್ ಗೇಮ್‌ನ ದುಷ್ಪರಿಣಾಮಗಳ ಬಗ್ಗೆ ಪೊಲೀಸ್ ಇಲಾಖೆಯ ವತಿಯಿಂದ ಹಮ್ಮಿಕೊಂಡಿರುವ ಕಾರ್ಯಕ್ರಮಗಳಾದ ಮನೆ ಮನೆ ಪೊಲೀಸ್, ತೆರೆದ ಮನೆ ಕಾರ್ಯಕ್ರಮಗಳ ಮೂಲಕ ನೇರವಾಗಿ ಮಕ್ಕಳೊಂದಿಗೆ ಸಂವಹನ ನಡೆಸಿ ಜಾಗೃತಿ/ಅರಿವು ಮೂಡಿಸಲಾಗುತ್ತಿರುತ್ತದೆ.<br><br>ಪೊಲೀಸರು ಮಕ್ಕಳ ದೈನಂದಿನ ಚಟುವಟಿಕೆ ಮತ್ತು ಬದಲಾಗುತ್ತಿರುವ ನಡವಳಿಕೆಗಳ ಮೇಲೆ ನಿರಂತರ ನಿಗಾವಹಿಸುವಂತೆ ಸೂಚಿಸಲಾಗುತ್ತಿರುತ್ತದೆ.<br><br>ಶಾಲಾ ಕಾಲೇಜುಗಳಿಗೆ ಭೇಟಿ ನೀಡಿ ಹಾಗೂ ಬೀಟ್ ಸಮಿತಿ ಸಭೆ ಹಾಗೂ ಗ್ರಾಮ ಗಸ್ತು ಸಭೆಗಳಲ್ಲಿ ಆನ್‌ಲೈನ್ ಗೇಮ್‌ಗಳಲ್ಲಿ ತೊಡಗದಂತೆ ಹಾಗೂ ಆನ್‌ಲೈನ್ ಗೇಮ್‌ನ ದುಷ್ಪರಿಣಾಮಗಳ ಬಗ್ಗೆ ಜಾಗೃತಿ ಕಾರ್ಯಕ್ರಮಗಳನ್ನು ನಡೆಸಿ ಅರಿವು ಮೂಡಿಸಲಾಗುತ್ತಿದೆ.<br>ರ್‍ಯಾಲಿಗಳು ಮತ್ತು ಓಟಗಳನ್ನು ನಡೆಸುವ ಮೂಲಕ ಯುವ ಜನಾಂಗವನ್ನು ಮತ್ತು ಮಕ್ಕಳನ್ನು ಎಚ್ಚರಿಸುವ ಹಾಗೂ ಜಾಗೃತಿ ಉಂಟು ಮಾಡುವ ಕಾರ್ಯ ಕೈಗೊಳ್ಳಲಾಗುತ್ತಿದೆ. |
| ಈ | ಆನ್‌ಲೈನ್ ಗೇಮ್‌ನ ಗೀಳು ವಿಶ್ವಾದ್ಯಂತ ಲಕ್ಷಾಂತರ ಮಕ್ಕಳ ಮೇಲೆ ಪರಿಣಾಮ ಬೀರುತ್ತಿರುವ ಸಂಕೀರ್ಣ ಸಮಸ್ಯೆಯಾಗಿದ್ದು, ಮಕ್ಕಳ ದೈಹಿಕ, ಭಾವನಾತ್ಮಕ ಮತ್ತು ಮಾನಸಿಕ ಯೋಗಕ್ಷೇಮದ ಮೇಲೆ ದೂರುಗಾಮಿ ಪರಿಣಾಮ ಬೀರುತ್ತಿದ್ದು, ಮಕ್ಕಳು ಬಳಸುವ ಮೊಬೈಲ್‌ಗಳಲ್ಲಿ ಆನ್‌ಲೈನ್ ಗೇಮ್ Appಗಳಿಗೆ ಸಂಪೂರ್ಣವಾಗಿ ಕಡಿವಾಣ ಹಾಕಲೇಬೇಕಾದ ತುರ್ತು ಅನಿವಾರ್ಯತೆ ಸೃಷ್ಟಿಯಾಗಿದ್ದು, ಈ ಕುರಿತು ಸರ್ಕಾರ ಈಗಲಾದರೂ ಅಗತ್ಯ ಕ್ರಮ ತೆಗೆದುಕೊಳ್ಳುವುದೇ; | • ಗೇಮಿಂಗ್ ಪ್ಲಾಟ್ ಫಾರ್ಮ್‌ಗಳನ್ನು ಲೈಸೆನ್ಸ್ ಪಡೆಯುವಂತೆ ಮಾಡಲು ಮತ್ತು ಅನಧಿಕೃತ ಆಪ್‌ಗಳನ್ನು ತಕ್ಷಣವೇ ತೆಗೆದು ಹಾಕಲು ಕ್ರಮ ಕೈಗೊಳ್ಳಲಾಗುತ್ತದೆ.<br>• ಅಪಾಯಕಾರಿ ಅಥವಾ ಜೂಜಾಟಕ್ಕೆ ಉತ್ತೇಜನ ನೀಡುವ ಆಪ್‌ಗಳನ್ನು Google Play Store ಅಥವಾ App Store ನಿಂದ ತೆಗೆದುಹಾಕಲಾಗುತ್ತದೆ.<br>• ಸಾರ್ವಜನಿಕರಲ್ಲಿ ಜೂಜಾಟದ ಹಾನಿಯ ಬಗ್ಗೆ ಜಾಗೃತಿ ಮೂಡಿಸಲು ಮಾಧ್ಯಮಗಳಲ್ಲಿ ಹಾಗೂ ಸಾಮಾಜಿಕ ಜಾಲತಾಣಗಳಲ್ಲಿ ಜಾಹಿರಾತು ಪ್ರಚಾರ ಪಡಿಸಲಾಗುತ್ತಿದೆ.<br>• ಶಾಲಾ ಕಾಲೇಜುಗಳಲ್ಲಿ ಜೂಜಾಟದ ವಿರುದ್ಧ ಬೋಧನೆ ನೀಡಲಾಗುತ್ತಿದೆ.<br>• ಮಕ್ಕಳನ್ನು ಆನ್‌ಲೈನ್ ಗೇಮೀಂಗ್‌ನಿಂದ ದೂರವಿಡಲು ಪೋಷಕರಿಗೆ ಸಲಹೆ ಮತ್ತು ಮಾರ್ಗಸೂಚಿ ನೀಡಲಾಗುತ್ತಿದೆ. |
| ಉ | ಮಕ್ಕಳು ಆನ್‌ಲೈನ್ ಗೇಮ್‌ನ ಗೀಳಿಗೆ ಒಳಗಾಗುವುದನ್ನು ಕಡ್ಡಾಯವಾಗಿ ತಡೆಯುವ ಸಲುವಾಗಿ ಮಕ್ಕಳ ಸುರಕ್ಷತೆಯನ್ನು ಆನ್‌ಲೈನ್ ಖಚಿತಪಡಿಸಿಕೊಳ್ಳಲು ಜಾಗೃತಿ ಮೂಡಿಸುವುದು ಹಾಗೂ ಮಕ್ಕಳಿಗೆ | ರಾಜ್ಯದಲ್ಲಿ ಆನ್‌ಲೈನ್ ಗೇಮ್‌ನಿಂದ ವಿದ್ಯಾರ್ಥಿಗಳು, ಯುವಕರು, ಮಕ್ಕಳು ಹಾಗೂ ಸಾರ್ವಜನಿಕರನ್ನು ರಕ್ಷಿಸಲು ಕೆಳಕಂಡ ಕಠಿಣ ಕ್ರಮಗಳನ್ನು ಅನುಸರಿಸಲಾಗುತ್ತಿದೆ:-<br><br>ಪೊಲೀಸ್ ಅಧಿಕಾರಿ/ಸಿಬ್ಬಂಧಿಗಳು ಶಾಲಾ-ಕಾಲೇಜುಗಳಿಗೆ ಭೇಟಿ ನೀಡಿ ಅವೇರ್‌ನೆಸ್ ಪ್ರೋಗ್ರಾಮ್ ಅನ್ನು ನಡೆಸಿ. ಆನ್‌ಲೈನ್ |

| | | |
|---|---|---|
| | ಅತ್ಯಂತ ಸುರಕ್ಷಿತ ಡಿಜಿಟಲ್ ಪರಿಸರವನ್ನು ಸೃಷ್ಟಿಸಲು ಸರ್ಕಾರ ಯಾವ ಕಾಲಮಿತಿಯೊಳಗೆ ಅಗತ್ಯ ಹಾಗೂ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುವುದು? | ಗೇಮ್ಸ್‌ನಿಂದ ಆಗುವ ದುಷ್ಪರಿಣಾಮದ ಬಗ್ಗೆ ಉಪನ್ಯಾಸ, ದೃಶ್ಯರೂಪಕಗಳ ಮೂಲಕ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.<br><br>ಬೀಟ್‌ಗಳಲ್ಲಿ ಯುವಕರು ಹಾಗೂ ಸಾರ್ವಜನಿಕರೊಂದಿಗೆ ಸಭೆ ನಡೆಸಿ ಯಾವುದೇ ತರಹದ ಆನ್‌ಲೈನ್ ಗೇಮ್ಸ್ ಮತ್ತು ಆನ್‌ಲೈನ್ ಜೂಜುಗಳ ಚಟಕ್ಕೆ ಒಳಗಾಗದಂತೆ ಎಚ್ಚರಿಕೆ ನೀಡಲಾಗುತ್ತಿದೆ.<br><br>ಆನ್‌ಲೈನ್ ಗೇಮ್ಸ್ ಹಾಗೂ ಆನ್‌ಲೈನ್ ಜೂಜಿನಲ್ಲಿ ತೊಡಗಿರುವವರ ಮೇಲೆ ದಾಳಿ ಮಾಡಿ ಪ್ರಕರಣಗಳನ್ನು ದಾಖಲಿಸಿ ಕಾನೂನು ಕ್ರಮ ಕೈಗೊಳ್ಳಲಾಗುತ್ತಿದೆ. |

ಹೆಚ್‌ಡಿ 152 ಎಸ್‌ಎಸ್‌ಟಿ 2026

(ಡಾ: ಜಿ.ಪರಮೇಶ್ವರ)
ಗೃಹ ಸಚಿವರು.